### ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಸರಿದ ಶಿಶಿರ, ಮೂಡಿದ ವಸಂತ

ಆ 40 ದಿನಗಳು ಮಹಾಬಲೇಶ್ವರದ ತಮ್ಮ ತಳ್ಳುಗಾಡಿಯ ಸ್ಟಾಲ್ ಅನ್ನು ಭಾವೇಶ್ ಮುಚ್ಚಿದ್ದರು. ಹಗಲೂ ರಾತ್ರಿ ಇನ್ಫೋಸಿಸ್ ಕಂಪನಿಯ ಆ ಸ್ಟಾಲ್‌ಗಾಗಿ ವಿವಿಧ ಆಕಾರಗಳ ಸುಂದರ ಮೋಂಬತ್ತಿಗಳನ್ನು ತಯಾರಿಸಲು ಆರಂಭಿಸಿದರು. ಆ 40 ದಿನಗಳ ಕಠಿಣ ಪರಿಶ್ರಮದಲ್ಲಿ ಬಹಳಷ್ಟು ಮೋಂಬತ್ತಿಗಳನ್ನು ಸಿದ್ಧ ಮಾಡಿದರು. ಮೊದಲಿನ ಒಂದಿಷ್ಟು ಸ್ಟಾಕ್ ಕೂಡಾ ಇತ್ತು. ನಿಶ್ಚಿತವಾದ ದಿನ, ತಮ್ಮ ಕೆಲವು ಮಿತ್ರರನ್ನು ಸಹಾಯಕ್ಕೆ ಜೊತೆಯಲ್ಲಿ ಕರೆದುಕೊಂಡು ಎರಡು ಗಾಡಿಗಳಲ್ಲಿ ಎಲ್ಲ ಮೋಂಬತ್ತಿಗಳನ್ನು ತುಂಬಿಕೊಂಡು ಪುಣೆಯ ಇನ್ಫೋಸಿಸ್‌ಗೆ ತಲುಪಿದರು.

ಪ್ರಸಾದ್ ಅವರು ತಾವು ಹೇಳಿದ ಹಾಗೆ, ಇವರೆಲ್ಲರಿಗೂ ಕಂಪನಿಯ ಅತಿಥಿಗೃಹದಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಿದ್ದರು. ಅಷ್ಟೇ ಅಲ್ಲ, ಅವರು ಪ್ರತಿಯೊಬ್ಬ ನೌಕರರಿಗೂ ಮೇಲ್ ಮೂಲಕ ಭಾವೇಶ್ ಅವರ ಮೋಂಬತ್ತಿಗಳ ಬಗ್ಗೆ ಅವರ 'ಸನ್‌ರೈಸ್ ಕ್ಯಾಂಡಲ್ಸ್' ಬಗ್ಗೆ ತಿಳಿಸಿದ್ದರು. ಆ ದಿನ ಅಲ್ಲಿ ಬಹಳಷ್ಟು ಬೇರೆ ಸಂಸ್ಥೆಗಳ ಸ್ಟಾಲ್‌ಗಳೂ ಇದ್ದವು. ಆದರೆ ಪ್ರಸಾದ್ ಎಲ್ಲ ನೌಕರರಿಗೆ ಭಾವೇಶ್ ಅವರ ಸ್ಟಾಲ್‌ಗೆ ಭೇಟಿ ಕೊಡಲೇಬೇಕು ಎಂದು ಆಗ್ರಹಿಸಿದ್ದರು. ಅವರ ಈ ವಿನಂತಿಯಿಂದಾಗಿ, 20,000ಕ್ಕೂ ಹೆಚ್ಚು ಇದ್ದ ನೌಕರರು ಭಾವೇಶ್ ಅವರ ಸ್ಟಾಲ್‌ಗೆ ಬಂದರು. ಆ ಕಾರ್ಯಕ್ರಮ ಪೂರಾ ಮೂರು ದಿನಗಳದ್ದಾಗಿತ್ತು. ಆದರೆ ಪ್ರಸಾದ್ ಅವರ ಪ್ರಯಾಸಪ್ರಯತ್ನ ಅದ್ಭುತ ಪರಿಣಾಮವನ್ನು ನೀಡಿತ್ತು. ಮೂರನೇ ದಿನ ಹನ್ನೊಂದೂವರೆ ಹೊತ್ತಿಗೆ ವರು ತಯಾರಿಸಿ ತಂದ ಎಲ್ಲ ಮೋಂಬತ್ತಿಗಳು ಖರ್ಚಾಗಿ ಹೋಗಿದ್ದವು!

ಬದುಕು ಅವಕಾಶಗಳ ಬಾಗಿಲು ತೆರೆದಾಗ, ಭಾವೇಶ್ ಅವಕಾಶಗಳನ್ನು ಗುರುತಿಸಿ ಪೂರ್ಣ ಶ್ರದ್ಧೆ ಮತ್ತು ಶ್ರಮವನ್ನು ತೊಡಗಿಸಿ ಬಳಸಿಕೊಂಡರು. ಒಮ್ಮೆ ಬಂದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರೆ, ಬದುಕು ಮತ್ತಷ್ಟು, ಇನ್ನಷ್ಟು ಅವಕಾಶಗಳನ್ನು ತಮ್ಮೆದುರು ತೆರೆಯುತ್ತದೆ ಎಂದು ಅರಿತರು. ಆದರೆ ಅವಕಾಶಗಳನ್ನು ನಾವು ಗುರುತಿಸದಿದ್ದರೆ, ಗುರುತಿಸಿಯೂ ಅಗತ್ಯದ ಶ್ರಮವನ್ನು ಹಾಕದಿದ್ದರೆ, ಬಾಗಿಲುಗಳು ಹಾಗೆಯೇ ಮುಚ್ಚಿಹೋಗುತ್ತವೆ. ಮತ್ತೆ ಯಾವಾಗಲೋ ನಾವೆದ್ದು 'ಬಾಗಿಲು ತೆಗೆ ತೆಗೆ' ಎಂದು ಕೈ ನೋಯುವವರೆಗೂ ಬಡಿದರೂ, ಅದೃಷ್ಟದೇವತೆ ಮುನಿದು ಮುಂದೆ ನಡೆದು ಹೋಗಿಬಿಟ್ಟಿರುತ್ತಾಳೆ. ಅದೃಷ್ಟ ಹಣೆಯಲ್ಲಿ ಬರೆದಿಲ್ಲ. ಅದೃಷ್ಟ ಆಕಸ್ಮಿಕವಲ್ಲ. ಅದೃಷ್ಟ ನಮ್ಮ ಕೈಯಲ್ಲಿದೆ. ನಮ್ಮ ಹಸ್ತದ ರೇಖೆಗಳು ನಮ್ಮ ಪ್ರಯತ್ನದಲ್ಲಿ ಬದಲಾಗುತ್ತವೆ. ನಮ್ಮ ಹಣೆಯಲ್ಲಿ ಬರೆದಿರುವುದೆಲ್ಲವೂ ನಮ್ಮದೇ ಹಸ್ತಾಕ್ಷರ.

ಈ ಎರಡೂವರೆ ದಿನಗಳ ಸಮಯದಲ್ಲಿ ಪ್ರಸಾದ್ ಅನೇಕ ಬಾರಿ ಇವರ ಸ್ಟಾಲ್‌ಗೆ ಬಂದರು. ಸ್ಟಾಲ್‌ನಲ್ಲಿ ಹೊಸ ಹೊಸ ಮೋಂಬತ್ತಿಗಳನ್ನು ಕಂಡಾಗ, 'ಅರೆ, ಇವು ಆ ದಿನ ಮಹಾಬಲೇಶ್ವರದ ಸ್ಟಾಲ್‌ನಲ್ಲಿ ಇರಲಿಲ್ಲ. ಇಷ್ಟೊಂದು ಸುಂದರ ವಿನ್ಯಾಸದ ಮೋಂಬತ್ತಿಗಳನ್ನು ನೀವು ಮಾಡಿದ್ದೀರಿ. ನಮ್ಮ ಇನ್ಫೋಸಿಸ್ ತರಹವೇ ಇನ್ನೂ ಅನೇಕ ಕಂಪನಿಗಳಿವೆ, ಅಲ್ಲಿಗೂ